

# ಚಾತಕ ಪಕ್ಷಿಯ ಕಥೆ

ಸ್ವಾಮಿ ರಾಮಾನುಜಾನಂದ



**ಚಾತಕ ಪಕ್ಷಿಯ ಉದಾಹರಣೆಯ ಮೂಲಕ ಭಗವಂತನಲ್ಲಿ ಪರಮ ಪ್ರೇಮರೂಪವಾದ ಭಕ್ತಿಯ ಲಕ್ಷಣಗಳನ್ನು ಈ ಲೇಖನದಲ್ಲಿ ತಿಳಿಯಪಡಿಸಲಾಗಿದೆ. ಸ್ವಾಮಿ ರಾಮಾನುಜಾನಂದರು ಕೇರಳದ ತಿರುವಲ್ಲ ಎಂಬ ಸ್ಥಳದಲ್ಲಿರುವ ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವರು.**

**ಕೆಲವರು** ಧರ್ಮದ ವಿರುದ್ಧವಾಗಿ ಎತ್ತುವ ಆಕ್ಷೇಪವೆಂದರೆ, ಧರ್ಮವು ಹಲವು ಪುರಾಣ ಕಥೆಗಳನ್ನು ಅವಲಂಬಿಸಿ ಕೊಂಡಿದೆ, ಆದುದರಿಂದ ನಾವು ಧರ್ಮದ ತತ್ವಗಳಿಗೆ ಮಾನ್ಯತೆ ಕೊಡಬೇಕಾಗಿಲ್ಲ, ಎಂದು. ಆದರೆ, ಕಥೆಗಳನ್ನು ಅವಲಂಬಿಸಿ ಕೊಂಡಿರುವುದು ಬರೀ ಧರ್ಮ ಮಾತ್ರವಲ್ಲ, ಮನುಷ್ಯನ ಬೇರೆ ಕ್ಷೇತ್ರಗಳಲ್ಲಿಯೂ ಕಥೆಗಳ ಕೈವಾಡವಿದೆ. ನ್ಯಾಯಾಲಯಗಳಲ್ಲಿ ವಕೀಲರು ತಮ್ಮ ವಾದಗಳನ್ನು ಪುಷ್ಟೀಕರಿಸುವುದಕ್ಕಾಗಿ ಕಥೆ ಹೇಳುತ್ತಾರೆ, ವಿಜ್ಞಾನದ ಪ್ರಾಧ್ಯಾಪಕರು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕಥೆ ಹೇಳುತ್ತಾರೆ. ಹೆಚ್ಚೇಕೆ ನಾಸ್ತಿಕರು ದೇವರಿಲ್ಲ ಎಂದು ಸಾಧಿಸಲಿಕ್ಕಾಗಿಯೂ ಕಥೆ ಹೇಳುತ್ತಾರೆ. ಈಗ ನಮಗೆ ಗೊತ್ತಾಗಿದೆ—ಕಥೆ ಕೇವಲ ಧರ್ಮದ ಸೃಷ್ಟಿಯಲ್ಲ ಎಂಬುದು. ಮನುಷ್ಯ ತನ್ನ ಸ್ವಾಸ್ಥ್ಯವನ್ನು ಉಳಿಸಿಕೊಳ್ಳಲು ತನ್ನ ಅಭಿಪ್ರಾಯಗಳನ್ನು, ಭಾವನೆಗಳನ್ನು ಬೇರೆಯವರಿಗೆ ತಿಳಿಸಬೇಕು. ಅದಕ್ಕಾಗಿ ಅವನು ಕಥೆ, ಉದಾಹರಣೆಗಳನ್ನು ಬಳಸುತ್ತಾನೆ. ಕಥೆ ವಿಷಯವನ್ನು ಪ್ರತಿಪಾದಿಸುವ, ತಿಳಿಸಿಕೊಡುವ ಒಂದು ಉತ್ತಮ ಮಾಧ್ಯಮ. ಕಥೆಗಳಿಂದ ವಿಷಯ ಸ್ಪಷ್ಟವಾಗುತ್ತದೆ, ಹೆಚ್ಚು ಮನ ಮುಟ್ಟುವಂತಾಗುತ್ತದೆ.

ಪ್ರೀತಿ ಎಂಬುದು ಒಂದು ಅದ್ಭುತ ಶಬ್ದ. ಒಬ್ಬ ವ್ಯಕ್ತಿಗೆ ಸಿಹಿತಿಂಡಿ ಎಂದರೆ ಪ್ರೀತಿ. ಆದರೆ ಆ ಪ್ರೀತಿಗೆ ಅಷ್ಟೇನೂ ಬೆಲೆಯಿಲ್ಲ. ಇಬ್ಬರು ಮಿತ್ರರು ಅನ್ಯೋನ್ಯ ಪ್ರೀತಿಸುತ್ತಾರೆ. ಅವರು ಸಮಾನರು. ಹಾಗಾಗಿ ಅನ್ಯೋನ್ಯ ಪ್ರೀತಿ ಇದೆ. ಈ ಪ್ರೀತಿ ಶಾಶ್ವತವಾಗಿರಲಾರದು. ಯಾವುದೋ ಕಾರಣದಿಂದ ಆ ಪ್ರೀತಿ ಮಾಯವಾಗಬಹುದು. ತಾಯಿ ಮಗುವನ್ನು ಪ್ರೀತಿಸುತ್ತಾಳೆ. ಆ ಮಗು ತಾಯಿಯನ್ನು ಪ್ರೀತಿಸುವುದಿಲ್ಲ. ಆದರೂ ತಾಯಿ ಮಗುವನ್ನು ಪ್ರೀತಿಸುತ್ತಾಳೆ. ಆ ಮಗು ದೊಡ್ಡವನಾದಾಗ ತಾಯಿಯನ್ನು ತಿರಸ್ಕರಿಸಬಹುದು. ಆದರೂ ತಾಯಿಯ ಪ್ರೀತಿ ಕಡಿಮೆಯಾಗುವುದಿಲ್ಲ. ಈ ಪ್ರೀತಿಗೆ **ಅಹೇತುಕ ಪ್ರೀತಿ** ಎಂದು ಹೆಸರು. ಇದು ಜಗತ್ತಿನಲ್ಲಿರುವ ಪ್ರೀತಿಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು. ಇಂತಹ ಅಹೇತುಕ ಪ್ರೀತಿ ಭಗವಂತನ ಮೇಲೆ ಉಂಟಾದರೆ ಆಗ ಅಂತಹ ಭಕ್ತನು ಭಗವಂತನ ಮೇಲೆ ಅಧಿಪತ್ಯವನ್ನು ಹೊಂದುತ್ತಾನೆ. ಆದರೆ ಬಾಯಿಯಲ್ಲಿ ಅಹೇತುಕ ಪ್ರೀತಿ ಎಂಬ ಶಬ್ದವನ್ನು ಉಚ್ಚರಿಸುವುದು ಬಹಳ ಸುಲಭ. ಅಹೇತುಕ ಪ್ರೀತಿ ಎಷ್ಟು ಕಷ್ಟವಾದದ್ದು ಎಂದು ತುಳಸೀದಾಸರು ದೋಹಾವಲಿ ಎಂಬ ಗ್ರಂಥದಲ್ಲಿ ಚಾತಕಪಕ್ಷಿಯ ಕಥೆಯ ಮೂಲಕ ನಮಗೆ ತಿಳಿಸುತ್ತಾರೆ.

ಚಾತಕ ಪಕ್ಷಿಯು ಮೇಘವನ್ನು ಪ್ರೀತಿಸುತ್ತದೆ. ಆ ಪಕ್ಷಿ ಪ್ರತಿಜ್ಞೆ ಮಾಡುತ್ತದೆ— ಸ್ವಾತಿ ನಕ್ಷತ್ರದಲ್ಲಿ ಮೇಘದಿಂದ ಬಿದ್ದ ನೀರನ್ನು ಮಾತ್ರ ಕುಡಿಯುತ್ತೇನೆ, ಬೇರೆ ನೀರನ್ನು ಕುಡಿಯಲೊಲ್ಲೆ ಎಂದು. ಮೇಘವನ್ನು ನೋಡಿ ಚಾತಕ ಪಕ್ಷಿ ಹೇಳುತ್ತದೆ : ನೀನು ಸಮಯಕ್ಕೆ ಸರಿಯಾಗಿ ಮಳೆ ಕೊಡು ಅಥವಾ ಇಡೀ ಜೀವನ ಮಳೆ ಕೊಡದಿರು, ನಾನು ಮಾತ್ರ ನಿನ್ನನ್ನೇ ಪ್ರೀತಿಸುತ್ತೇನೆ.

ಈಗ ಕವಿಯು ಚಾತಕಕ್ಕೆ ಉಪದೇಶ ಕೊಡುತ್ತಾನೆ : ಹೇ ಚಾತಕ, ನೀನು ಸ್ವಾತಿ ನಕ್ಷತ್ರದಲ್ಲಿ ಬೀಳುವ ಮಳೆಯ ನೀರನ್ನೂ ಸಹ ಕುಡಿಯಬೇಡ. ಯಾಕೆಂದರೆ, ಪ್ರೇಮದ ಪಿಪಾಸೆ ಹೆಚ್ಚಾಗುತ್ತಲೇ ಇರಬೇಕು; ಕಡಿಮೆಯಾದರೆ ಪ್ರೇಮದ ಪ್ರತಿಷ್ಠೆಗೆ ಧಕ್ಕೆ ಬಂದೀತು. ಪ್ರೇಮದ ಒಂದು ಮುಖ್ಯ ಲಕ್ಷಣವೆಂದರೆ, ತಾನು ಪ್ರೀತಿಸುವ ವಸ್ತುವಿಗಾಗಿ ಅನಂತ ಕಷ್ಟಗಳನ್ನು ಅನುಭವಿಸುವುದು. ತಾಯಿ ಮಗುವಿಗಾಗಿ ಎಷ್ಟು ಕಷ್ಟಗಳನ್ನು ಸಹಿಸುತ್ತಾಳೆ! ಆದುದರಿಂದ ತಾಯಿಯ ಪ್ರೀತಿಯು ಅಷ್ಟು ಶ್ರೇಷ್ಠವೆಂದು ಹೇಳಲ್ಪಟ್ಟಿದೆ.

ಚಾತಕ ಪಕ್ಷಿಯು ಬಾಯಾರಿಕೆಯಿಂದ ಬಳಲಿದೆ. ತನ್ನ ಪ್ರಿಯತಮ ಮೇಘದ ಹೆಸರನ್ನು ಸದಾ ಜಪಿಸುತ್ತಿದೆ. ಒಮ್ಮೆಯೂ ಅದಕ್ಕೆ ಮೇಘದಲ್ಲಿ ದೋಷಗಳಿವೆಯೆಂದು ತೋರುವುದಿಲ್ಲ. ಪ್ರೇಮ ಸಮುದ್ರದ ಆಳವನ್ನು ಕಂಡು ಹಿಡಿಯುವವರು ಯಾರು? ಮೇಘವು ಶಿಲೆಯಂತಹ ಮಂಜುಗಡ್ಡೆಯ ತುಂಡುಗಳನ್ನು ಸುರಿದು ಚಾತಕದ ರೆಕ್ಕೆಯನ್ನು ಕಡಿದರೂ, ಚಾತಕವು ಪ್ರೇಮವ್ಯವಹಾರದಲ್ಲಿ ಒಂದಿಷ್ಟೂ ವ್ಯತ್ಯಾಸ ತೋರಲಾರದು. ಮೇಘವು ಗರ್ಜಿಸುತ್ತದೆ, ಮಿಂಚು ತೋರಿಸಿ ಬೆದರಿಸುತ್ತದೆ, ಮತ್ತು ಮಂಜುಗಡ್ಡೆಯ ತುಂಡುಗಳನ್ನು ಸುರಿಸುತ್ತದೆ. ಆದರೂ ಚಾತಕವು ಬೇರೆ ಯಾರ ಕಡೆಗೂ ನೋಡಲಾರದು. ಮೇಘವು ಮಿಂಚು, ಗುಡುಗು, ನೀರ್ಗಲ್ಲು, ಬಿರುಗಾಳಿಗಳ ಮೂಲಕ ತನ್ನ ರೋಷವನ್ನು ತೋರಿಸುತ್ತದೆ. ಆದರೆ ಚಾತಕವು ಒಂದಿಷ್ಟೂ ಅಸಂತೋಷ ಪಡುವುದಿಲ್ಲ, ಅದು ತನ್ನ ಪ್ರಿಯತಮ ತನ್ನನ್ನು ಪ್ರೀತಿಸುತ್ತಿದೆ ಎಂದೇ ತಿಳಿಯುತ್ತದೆ. ಎಲ್ಲರೂ ಚಾತಕವನ್ನು ನೋಡಿ ಧನ್ಯತೆಯ ಭಾವವನ್ನು ಪಡೆಯಬೇಕು.

ಸ್ವಾತಿ ನಕ್ಷತ್ರದಲ್ಲಿಯೂ ನೀರು ನೇರವಾಗಿ ಬಿದ್ದರೆ ಮಾತ್ರ ಚಾತಕವು ಕುಡಿಯುತ್ತದೆ. ಎಲ್ಲಿಯಾದರೂ ನೀರಿನ ಹನಿಗಳು ಓರೆಯಾಗಿ ಬಂದು ಬಿದ್ದರೆ, ಅದು ಆ ನೀರನ್ನು ಸ್ವೀಕರಿಸಲಾರದು, ಯಾಕೆಂದರೆ ಚಾತಕವು ಮೇಘವನ್ನು ಪ್ರೀತಿಸುತ್ತದೆ, ಅದು ಮೇಘದ ಹತ್ತಿರ ಭಿಕಾರಿ ಅಲ್ಲ. ಪೃಥಿವಿಯಲ್ಲಿ ಮೇಘದಂತಹ ದಾನಿ ಯಾರೂ ಇಲ್ಲ, ಯಾಕೆಂದರೆ ಇಡೀ ಭೂಲೋಕಕ್ಕೆ ನೀರನ್ನು ಕೊಡುವವನು ಮೇಘ. ಪೃಥಿವಿಯಲ್ಲಿ ಚಾತಕದಷ್ಟು ಶ್ರೇಷ್ಠ ಗ್ರಾಹಕರೂ ಯಾರೂ ಇಲ್ಲ, ಯಾಕೆಂದರೆ ಅಷ್ಟು ಮಳೆ ಬಿದ್ದರೂ ಅದು ಕುಡಿಯುವುದು ಒಂದು ಗುಟುಕು ನೀರು ಮಾತ್ರ.

ಮೂರು ಲೋಕಗಳಲ್ಲಿ ಚಾತಕದಷ್ಟು ಕೀರ್ತಿವಂತರು ಯಾರೂ ಇಲ್ಲ. ಯಾಕೆಂದರೆ ಅದು ಒಮ್ಮೆಯೂ ನೀರಿಗಾಗಿ ಬೇರೊಬ್ಬರನ್ನು ಯಾಚಿಸುವುದಿಲ್ಲ. ಆಸೆಗಳು ಎಲ್ಲರಲ್ಲೂ ಇವೆ. ಹಾಗಾಗಿ ಎಲ್ಲರೂ ಇತರರನ್ನು ಬೇಡುತ್ತಾರೆ. ಅನನ್ಯ ಪ್ರೇಮಿ ಚಾತಕವು ಮಾತ್ರ ಮೇಘವನ್ನು ಬಿಟ್ಟು ಯಾರೊಡನೆಯೂ ಬೇಡುವುದಿಲ್ಲ.

ಚಾತಕ ಮತ್ತು ಮೇಘದ ಪ್ರೇಮ ಅದ್ವಿತೀಯ. ಯಾಕೆಂದರೆ ಎಲ್ಲೆಡೆಯಲ್ಲೂ ಯಾಚಕನು ಇತರರಿಗೆ ಋಣಿಯಾಗಿರುತ್ತಾನೆ. ಇಲ್ಲಿ ಮೇಘವು ಚಾತಕಕ್ಕೆ ಋಣಿಯಾಗಿದೆ. ಚಾತಕವು ಎಂದೂ ಮೇಘವನ್ನು ನೀರಿಗಾಗಿ ಬೇಡಿಕೊಳ್ಳುವುದಿಲ್ಲ. ಅದು ಎಂದೂ ಮಳೆಯಲ್ಲಿ ಬಿದ್ದ ನೀರನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದಿಲ್ಲ, ಎಂದೂ ನೀರಿಗಾಗಿ ತನ್ನ ತಲೆಯನ್ನು ತಗ್ಗಿಸುವುದಿಲ್ಲ. ಇಂತಹ ಯಾಚಕನಿಗೆ ಮೇಘವಲ್ಲದೆ ಬೇರೆ ಯಾರು ನೀರನ್ನು ಕೊಡಬಲ್ಲರು? ಜಗತ್ತಿನಲ್ಲಿ ಎಲ್ಲರೂ ಮೇಘವು ನೀರು ಕೊಟ್ಟೀತೇ ಎಂದು ಯಾವಾಗಲೂ ಸಂಶಯದಲ್ಲಿ ಇರುತ್ತಾರೆ. ಅಂತಹ ಮೇಘವು ಈಗ ಚಾತಕಕ್ಕೆ ಋಣಿಯಾಗಿದೆ. ಚಾತಕವು ಇಷ್ಟು ಕಷ್ಟ ಸಹಿಸಿದರೂ, ಮೇಘದ ಮೇಲಿನ ಅದರ ಪ್ರೀತಿ ವರ್ಧಿಸುತ್ತಲೇ ಹೋಗುತ್ತದೆ. ಮೇಘವು ಇಷ್ಟು ದೊಡ್ಡ ದಾನಿಯಾಗಿದ್ದರೂ, ಚಾತಕಕ್ಕೆ ಋಣಿಯಾಗಿದೆ.

ಮೇಘದ ಪ್ರೇಮವು ನಮ್ಮ ಗೋಚರಕ್ಕೆ ಬರುತ್ತದೆ. ಯಾಕೆಂದರೆ ಜಗತ್ತಿನ ಜನರೆಲ್ಲರೂ ಅಮೂಲ್ಯ ನೀರನ್ನು ಮೇಘದಿಂದಲೇ ಪಡೆಯುತ್ತಿದ್ದಾರೆ. ಚಾತಕದ ಪ್ರೇಮವು ಮಾತ್ರ ಯಾರ ಗೋಚರಕ್ಕೂ ಬಾರದು. ಚಾತಕದ ಜೀವನದಲ್ಲಿ ಮತ್ತು ಮರಣದಲ್ಲಿ ಆ ಪ್ರೇಮ ತುಂಬಿದೆ. ಜಗತ್ತಿನ ಜನರೆಲ್ಲರೂ ಮೇಘದಿಂದ ಉಪಕೃತರು, ಅರ್ಥಾತ್ ಮೇಘವು ವರ್ಷಿಸಿದ ನೀರಿನಿಂದ ತಮ್ಮ ಜೀವನವನ್ನು ನಡೆಸುತ್ತಾರೆ. ಆದರೆ ಯಾರೂ ಮೇಘವನ್ನು ಪ್ರೀತಿಸುವುದನ್ನು ನಾವು ಕಾಣಲಾರೆವು. ಚಾತಕವು ಮಾತ್ರ ಮೇಘವನ್ನು ಪ್ರೀತಿಸುತ್ತದೆ.

ಜಗತ್ತಿನಲ್ಲಿ ಎಷ್ಟೋ ಪಕ್ಷಿಗಳಿವೆ. ಅವು ಎಲ್ಲೆಲ್ಲೋ ಬಿದ್ದ ನೀರನ್ನು ಕುಡಿದು ಜೀವಿಸುತ್ತವೆ. ಹದಿನಾಲ್ಕು ಲೋಕಗಳಲ್ಲೂ ಕೀರ್ತಿ ಮಾತ್ರ ಚಾತಕದ್ದೇ. ಕೋಗಿಲೆ, ನವಿಲು, ಚಕೋರ ಇವುಗಳು ಇಂಪಾದ ಸ್ವರದಲ್ಲಿ ಹಾಡಬಹುದು, ಆದರೆ ಅವುಗಳ ಮನಸ್ಸು ನಿರ್ಮಲವಲ್ಲ. ವಿಶ್ವದಲ್ಲೆಲ್ಲಾ ನಿರ್ಮಲ ಕೀರ್ತಿ ಚಾತಕದ್ದೇ. ಹಂಸವು ಮಾನಸಸರೋವರದಲ್ಲಿ ವಾಸಿಸುತ್ತದೆ ಮತ್ತು ಅದಕ್ಕೆ ಹಾಲನ್ನು ಮಾತ್ರ ಸ್ವೀಕರಿಸಿ, ನೀರನ್ನು ತ್ಯಜಿಸುವ ವಿಶೇಷ ಶಕ್ತಿಯಿದೆ. ಆದರೆ, ಪ್ರೇಮದ ಕೀರ್ತಿ ಚಾತಕಕ್ಕೆ ಮಾತ್ರ.

ಜಗತ್ತಿನ ಬುದ್ಧಿವಂತರು, ತಮ್ಮನ್ನು ತಾವೇ ಬುದ್ಧಿವಂತರೆಂದು ತಿಳಿದವರು, ಹೇಳುತ್ತಾರೆ—ಚಾತಕವು ಪಾಪಿ; ಆದುದರಿಂದ ಮೇಘವು ಚಾತಕ ಇರುವಲ್ಲಿ ಮಳೆ ಕೊಡುವುದಿಲ್ಲ. ಚಾತಕವು ಪಾಪಿಯಲ್ಲ; ಮೇಘವು ಮೂರ್ಖನಲ್ಲ. ಪ್ರಹ್ಲಾದನ ಅವಸ್ಥೆ ಜ್ಞಾಪಿಸಿಕೊಂಡರೆ ಅರ್ಥವಾದೀತು, ಪ್ರೇಮದ ಮಾರ್ಗ ಎಷ್ಟು ಕಠಿಣವಾದದ್ದು ಎಂದು. ಭಗವಂತನು ಪ್ರಹ್ಲಾದನನ್ನು ಹಲವು ಕಷ್ಟಗಳಿಗೆ ಗುರಿಪಡಿಸಿದ ನಂತರವೇ ದರ್ಶನ ಕೊಟ್ಟು ಅನುಗ್ರಹಿಸಿದ್ದಾನೆ.

ಈಗ ಚಾತಕಕ್ಕೆ ಒಂದು ಚಿಂತೆ—ತನ್ನ ಮರಣದ ನಂತರ, ತನ್ನ ಎಲುಬುಗಳು ಸಾಧಾರಣ ನೀರಿನಲ್ಲಿ ಬಿದ್ದರೆ ಏನು ಗತಿ? ಒಂದು ಚಾತಕವು ಒಬ್ಬ ವ್ಯಾಧನಿಂದ ಕೊಲ್ಲಲ್ಪಟ್ಟಿತು. ಮರಣ ಸಮಯದಲ್ಲಿ ಚಾತಕದ ಶರೀರವು ಗಂಗಾನದಿಯಲ್ಲಿ ಬಿದ್ದಿತು. ಆಗಲೂ ಚಾತಕಕ್ಕೆ ಒಂದೇ ಚಿಂತೆ—ತನ್ನ ಪ್ರೇಮಪ್ರತಿಜ್ಞೆಗೆ ಭಂಗ ಬರಬಾರದು ಎಂದು. ಹಾಗಾಗಿ ಚಾತಕವು ತನ್ನ ಕೊಕ್ಕನ್ನು ಮೇಲ್ಮುಖವಾಗಿ ಇರಿಸಿಕೊಂಡಿತು, ಯಾಕೆಂದರೆ ಗಂಗಾನದಿಯ ನೀರು ಕೊಕ್ಕಿನ ಒಳಗೆ ಹೋದರೆ ತನ್ನ ಪ್ರೇಮಪ್ರತಿಜ್ಞೆಗೆ ಭಂಗ ಪಾದಂತಾಗುತ್ತದೆ, ಎಂದು.

ಇನ್ನೊಮ್ಮೆ ಚಾತಕದ ಮೊಟ್ಟೆಯೊಡೆದು ಮರಿ ಹೊರಗೆ ಬಂದಾಗ, ಆ ಮೊಟ್ಟೆಯ ಕೋಶವು ನೀರಿನ ಸ್ಪರ್ಶದಲ್ಲಿರಬಾರದೆಂಬ ಉದ್ದೇಶದಿಂದ, ಅದನ್ನು ನೀರಿನಿಂದ ಮೇಲೆಸೆಯಿತು. ಚಾತಕ ಪಕ್ಷಿಯು ತನ್ನ ಮಗನಿಗೆ ಪುನಃಪುನಃ ಕೊಟ್ಟ ಉಪದೇಶವೇನೆಂದರೆ, ಮರಣದ ನಂತರ ತನಗೆ, ಮೇಘದಿಂದ ಬಿದ್ದ ನೀರಿನಿಂದಲೇ ತರ್ಪಣ ಕೊಡಬೇಕು, ಬೇರೆ ನೀರಿನಿಂದ ಕೊಡಬಾರದು ಎಂದು. ಚಾತಕ ಪಕ್ಷಿಯು ಜೀವನಕಾಲದಲ್ಲಿ ಮೇಘವನ್ನು ಬಿಟ್ಟು ಬೇರೆಯವರ ಮುಂದೆ ತಲೆ ಬಗ್ಗಿಸಲಿಲ್ಲ, ಮೃತ್ಯುಸಮಯದಲ್ಲಿ ಸುರನದಿ ಗಂಗಾಜಲದ ಸ್ಪರ್ಶವೂ ಅದಕ್ಕೆ ಬೇಡ. ಅದಕ್ಕೆ ಬೇಕಾದುದು ಪ್ರೇಮದ ಬಾಯಾರಿಕೆ ಮಾತ್ರ. ಆದುದರಿಂದ ಮಳೆಗಾಲದಲ್ಲೂ ನೀರು ಕುಡಿಯದೆ ಮೇಘದಿಂದ ಬೀಳುವ ಹನಿಗಳಿಗಾಗಿ ಕಾದಿರುತ್ತದೆ. ಅದು ಎಲ್ಲಾ ದಿನಗಳಲ್ಲೂ ಮೇಘದ ಹೆಸರನ್ನೇ ಜಪಿಸುತ್ತಿರುತ್ತದೆ. ಆದರೆ ಎಲ್ಲರಿಗೂ ತಿಳಿದಿರಲಿ, ಅದು ಸ್ವಾರ್ಥಕ್ಕಾಗಿ ಮೇಘದ ಹೆಸರನ್ನು ಹೇಳುವುದಿಲ್ಲ.

ಬೇಸಿಗೆ ಕಾಲ; ಚಾತಕ ಪಕ್ಷಿಯು ಬಳಲಿತ್ತು. ಆಗ ಅದಕ್ಕೆ ವೃಕ್ಷದ ನೆರಳಲ್ಲಿ ವಿಶ್ರಮಿಸಬೇಕೆಂದು ಅನ್ನಿಸಿತು. ಆದರೆ ಪುನಃ ನೆನಪು ಬಂತು, ವೃಕ್ಷ ಎಲ್ಲಾ ನೀರುಗಳನ್ನು ಹೀರುತ್ತದೆ. ವೃಕ್ಷಕ್ಕೆ ಮೇಘದ ಮೇಲೆ ಪ್ರೇಮವಿಲ್ಲ. ಆದುದರಿಂದ ಅದು ಮರದ ನೆರಳಿನಲ್ಲಿ ವಿಶ್ರಮಿಸಲಿಲ್ಲ.

ಇಂತಹ ಪ್ರೇಮದ ಹೆಸರು ಏಕಾಂಗೀ ಪ್ರೇಮ, ಅರ್ಥಾತ್ ತಾನು ಪ್ರೇಮಿಸುವ ವಸ್ತು ತನ್ನನ್ನು ಪ್ರೀತಿಸಲಿ ಅಥವಾ ಬಿಡಲಿ, ತಾನು ಮಾತ್ರ ಪ್ರೇಮವನ್ನು ಬಿಡಲಾರೆ—ಎಂಬ ಭಾವ.

ಈ ಚಾತಕದ ಕಥೆಯಲ್ಲಿ ಮೇಘವೆಂದರೆ ಪರಮಾತ್ಮ ಮತ್ತು ಚಾತಕ ಪಕ್ಷಿ ಜೀವಾತ್ಮ—ಇಷ್ಟು ತಿಳಿದರೆ ಕಥೆ ಸುಲಭವಾಗಿ ಅರ್ಥವಾಗುತ್ತದೆ.